

## ಕ್ಯಾಮೆರಾ ಹಿಂದಿನ ವೃತ್ತಿಗೆ ಕಾರಣ...

ಕಡಿಮೆ ಅಂತರದ ಅವಧಿಯಲ್ಲಿ ನಟನೆ, ನಿರ್ಮಾಣ ಮತ್ತು ನಿರ್ದೇಶನ ಈ ಮೂರೂ ವಿಭಾಗಗಳಲ್ಲಿ ಹೆಸರು ಮೂಡಿಸಿದಾತ ಸೊಹೈಲ್ ಖಾನ್. ನಟನಾಗಿ ದೊಡ್ಡ ಹೆಸರು ಮಾಡಲಿಲ್ಲ. ನಿರ್ದೇಶಕನಾಗಿ ಒಂದಷ್ಟು ಹೆಸರು ಮಾಡಿದ ಸೊಹೈಲ್, ನಿರ್ಮಾಪಕನಾಗಿಯೇ ಹೆಚ್ಚು ಯಶಸ್ಸು ಕಂಡಾತ. ಕ್ಯಾಮೆರಾ ಮುಂದಿನ ಕೆಲಸಕ್ಕಿಂತಲೂ ಕ್ಯಾಮೆರಾ ಹಿಂದೆಯೇ ತಾನು ಹೆಚ್ಚು ಕಾಣಿಸಿಕೊಂಡಿರುವುದಕ್ಕೆ ಕಾರಣ ನೀಡಿದ್ದಾನೆ ಸೊಹೈಲ್.

'ನಟನಾಗಿ ನನಗೆ ಒಳ್ಳೆಯ ಕೆಲಸ ಸಿಗಲೇ ಇಲ್ಲ' ಎನ್ನುವುದು ಆತನ ಆರೋಪ. ನಟಿಸುವ ಉದ್ದೇಶದಿಂದಷ್ಟೇ ನಟನಾ ಕ್ಷೇತ್ರದಲ್ಲಿ ಉಳಿದುಕೊಳ್ಳುವುದು ಆತನಿಗೆ ಇಷ್ಟವಿರಲಿಲ್ಲವಂತೆ. 'ಒಂದೆರಡು ಸಿನಿಮಾಗಳಲ್ಲಿ ನಟಿಸಿದ್ದೆ. ಆದರೆ ಇಲ್ಲಿ ನೆಲೆಯೂರಲು ನನ್ನಲ್ಲಿ ಒಳ್ಳೆಯ ನಿರ್ಮಾಣ ಸಂಸ್ಥೆಯೇ ಇದೆ ಎಂಬುದು ಅರಿವಾಯಿತು. ನಿರ್ದೇಶನ ಮತ್ತು ನಿರ್ಮಾಣ ಕೆಲಸಗಳನ್ನೇ ಮಾಡೋಣ ಎಂದು ನಿರ್ಧರಿಸಿದೆ' ಎಂದಿದ್ದಾನೆ ಸೊಹೈಲ್.

ಈಗಲೂ ಒಳ್ಳೆಯ ಅವಕಾಶಗಳು ಸಿಕ್ಕರೆ ನಟಿಸಲು ಆತ ಸಿದ್ಧನಾಗಿದ್ದಾನೆ. ಒಂದು ವೇಳೆ ಉತ್ತಮ ಪಾತ್ರ ಸಿಗದಿದ್ದರೆ ನಿರ್ಮಾಣ ಮತ್ತು ನಿರ್ದೇಶನ ಇದ್ದೇ ಇದೆ ಎಂದು ಹೇಳುತ್ತಾನೆ. 'ನಟ' ಎಂಬ ಗುರುತಿನ ಚೀಟಿ ಹೊತ್ತುಕೊಂಡು ಅನಗತ್ಯವಾದ ಮತ್ತು ವ್ಯರ್ಥ ಕೆಲಸಗಳನ್ನು ಮಾಡುವುದು ತನಗಿಷ್ಟವಿಲ್ಲ ಎನ್ನುವುದು ಆತನ ನೀತಿ. ಅದರ ಬದಲು ತೆರೆಯ ಹಿಂದಿನ ಕೆಲಸದಲ್ಲೇ ಹೆಚ್ಚು ಖುಷಿ ಸಿಗುತ್ತಿದೆಯಂತೆ.

1997ರಲ್ಲಿ 'ಔಜಾರ್' ಚಿತ್ರದ ಮೂಲಕ ನಿರ್ದೇಶನದ ಟೊಪ್ಪಿ ಧರಿಸಿದ ಸೊಹೈಲ್, ಈಗ ನವಾಜುದ್ದಿನ್ ಸಿದ್ದಿಕಿ ನಾಯಕರಾಗಿರುವ 'ಫ್ರೀಕಿ ಅಲಿ' ಎಂಬ ಹಾಸ್ಯಮಯ ಚಿತ್ರ ನಿರ್ದೇಶಿಸಿದ್ದಾನೆ.



## ಹೀರೋಯಿನ್ ಮೆಟೀರಿಯಲ್ ಅಲ್ಲ!

'ರಾಂಝಾನಾ', 'ತನು ವೆಡ್ಸ್ ಮನು ರಿಟರ್ನ್ಸ್', 'ನಿಲ್ ಬಟ್ಟೇ ಸನ್ನಟಾ' ಮುಂತಾದ ಚಿತ್ರಗಳಲ್ಲಿ ಅದ್ಭುತ ಅಭಿನಯ ನೀಡಿ ಮೆಚ್ಚುಗೆ ಗಳಿಸಿರುವ ಸ್ವರ ಭಾಸ್ಕರ್, ಒಂದು ಕಾಲದಲ್ಲಿ ತಿರಸ್ಕಾರಕ್ಕೆ ಒಳಗಾಗಿದ್ದ ನಟಿಯಾಗಿದ್ದಳು. ಈ ವಿಚಾರವನ್ನು ಸ್ವತಃ ಆಕೆಯೇ ಬಹಿರಂಗಪಡಿಸಿದ್ದಾಳೆ. ಚಿತ್ರರಂಗದಲ್ಲಿ ನೆಲೆಯೂರಲು ಆಕೆ ಪ್ರಯತ್ನಿಸುತ್ತಿದ್ದಾಗ ಅನೇಕ ನಿರ್ದೇಶಕರು, 'ನೀನು ಹೀರೋಯಿನ್ ಮೆಟೀರಿಯಲ್' ಅಲ್ಲ ಎಂದು ಹೀಯಾಳಿಕೆಯ ಮಾತನ್ನಾಡಿದ್ದರಂತೆ. ನಟಿಯಾಗಲು ಯೋಗ್ಯ ವಸ್ತುವೂ ನೀನಲ್ಲ ಎಂದಿದ್ದರು. ಅವರ ನಡುವೆಯೇ ಕೆಲವರು 'ನಿನ್ನಲ್ಲಿ ಬುದ್ಧಿವಂತಿಕೆಯ ನೋಟವಿದೆ' ಎಂದು ಹೊಗಳಿದ್ದೂ ಇದೆ.

'ಪ್ರತಿಯೊಬ್ಬ ನಟಿಯೂ ತನ್ನ ಅಂದ ಚೆಂದ ಬಗ್ಗೆ ಒತ್ತಡಗಳನ್ನು ಅನುಭವಿಸುತ್ತಾಳೆ. ನಟಿಯರು ಮಾತ್ರವಲ್ಲ, ಬಹುಶಃ ಎಲ್ಲ ಮಹಿಳೆಯರೂ ಸಾಮಾನ್ಯವಾಗಿ ಇಂತಹ ಒತ್ತಡಕ್ಕೆ ಒಳಗಾಗುತ್ತಾರೆ. ಸೌಂದರ್ಯದ ವಿಚಾರದಲ್ಲಿ ಪುರುಷರಿಗೆ ಹೋಲಿಸಿದರೆ, ಮಹಿಳೆಯರನ್ನೇ ಹೆಚ್ಚಾಗಿ ಇವರು ಹೀಗೆಯೇ ಎಂದು ನಿರ್ಣಯಿಸುತ್ತಾರೆ' ಎನ್ನುವುದು ಆಕೆಯ ಬೇಸರ.

'ನೀವು ನೋಡಲು ಚೆನ್ನಾಗಿಲ್ಲವಲ್ಲ. ಅದ್ರ ಕುರಿತು ನಿಮಗೆ ಏನೆನ್ನಿಸುತ್ತದೆ?' ಎಂಬ ಪ್ರಶ್ನೆಗಳನ್ನು ಆಕೆಗೆ ಕೇಳಿದ ಪತ್ರಕರ್ತರೂ ಇದ್ದಾರೆ. ಈ ಅವಮಾನ, ಸಂಕಷ್ಟಗಳನ್ನೆಲ್ಲವನ್ನೂ ಮೀರಿ ಸ್ವರ ನಟಿಯಾಗಿ ಗುರುತಿಸಿಕೊಂಡಿದ್ದಾಳೆ. ಆದರೆ ಅಭಿನಯ ಪ್ರತಿಭೆಗಿಂತಲೂ ಸೌಂದರ್ಯಕ್ಕೇ ಬಿಟೌನ್ ಮಣೆ ಹಾಕುತ್ತದೆ ಎಂಬ ಆರೋಪಗಳಿಗೆ ಸ್ವರಳ ಅನುಭವ ಉತ್ತಮ ಉದಾಹರಣೆ.

■ ಅಮಿ